ಆಕೆ ತನಗಿಂತ ಬ್ಯಾಂಕ್‌ನಲ್ಲಿ ಕೂಡಿಟ್ಟ ಆ ಲಂಚದ ಹಣವೇ ತನ್ನ ಗಂಡನಿಗೆ ಹೆಚ್ಚು ಎನಿಸಿತಲ್ಲ! – ಎಂದು ಆತನ ಮೇಲೆ ಅಸಹ್ಯ ಪಟ್ಟುಕೊಳ್ಳಲಾರಂಭಿಸಿದಳು. ಇದರಿಂದಾಗಿ, 'ಇನ್ನು ನೀನು ಇದ್ದರೆಷ್ಟು ಬಿಟ್ಟರೆಷ್ಟು...' ಎಂಬಂತೆ ತನ್ನ ಪಾಡಿಗೆ ತಾನು ಇರತೊಡಗಿದಳು. ಯಾವಾಗ ದಿನ ಕಳೆದಂತೆ ಅವರಿಬ್ಬರ ನಡುವೆ ಅಂತರ ಹೆಚ್ಚಾಗತೊಡಗಿತೋ ಆಗಲೇ ಆಕೆ ತನ್ನನ್ನು ಗಂಡ ಎಂಬುದನ್ನೇ ಮರೆತಿದ್ದಾಳೆ ಎಂಬುದು ಅರಿವಿಗೆ ಬಂದು ಆತನನ್ನು ಇನ್ನಿಲ್ಲದ ದುಃಖದ ಮಡುವಿಗೆ ತಳ್ಳಿತು.

ಅಂಥ ವಿಕ್ಷಿಪ್ತ ಸಂದರ್ಭದಲ್ಲಿಯೇ ಅದೊಂದು ದಿನ ಆ ಅಸ್ಪಷ್ಟ ಮುಖ ನಿಜವೇ ಎಂಬಂತೆ ಇದ್ದಕ್ಕಿದ್ದಂಗೆ ಆತನ ಕಣ್ಮುಂದೆ ಬಂದು ನಿಂತಿತು! ಅದು ಹಾಗೆ ಏಕಾಏಕಿ ಆತನ ಎದುರಿಗೆ ಬಂದು ನಿಲ್ಲಲು ಆತ ಅರೆಕ್ಷಣ ವಿಚಲಿತನಾದ. ಆದರೆ, ಅದಕ್ಕೆಲ್ಲ ಕಾರಣವಿತ್ತು. ಆ ಗಳಿಗೆಯಲ್ಲಿ, ಈ ಹಿಂದೆ ಆತನ ಕಲ್ಪನೆಯಲ್ಲಿ ಒಡಮೂಡಿದ್ದ ಉದ್ದನೆಯ ಬಿಳಿ ಬಣ್ಣದ ನಿಲುವಂಗಿ ತೊಟ್ಟಿದ್ದ, ಕೊರಳಲ್ಲಿ ಪಚ್ಚೆ ಹರಳಿನ ಸರವನ್ನು ಹಾಕಿಕೊಂಡಿದ್ದ ಆ ಮುಖವನ್ನೇ ದಿಟ್ಟಿಸಿ ನೋಡುತ್ತಾ ನಿಂತ. ಅದು ಎಷ್ಟರಮಟ್ಟಿಗೆ ಎಂದರೆ ಆ ಮುಖದಲ್ಲಿ ತುಂಬಿ ತುಳುಕುತ್ತಿದ್ದ ದಿವ್ಯ ತೇಜಸ್ಸು, ತನ್ನ ದೇಹಕ್ಕೆ ವರ್ಗಾವಣೆಗೊಳ್ಳುತ್ತಿದೆಯೇನೊ ಎಂಬ ಭಾವನೆಯಲ್ಲಿ ತನ್ನ ಸುತ್ತಲಿನ ಲೋಕವನ್ನೇ ಮರೆತಂತಿದ್ದ! ಆಗಲೇ ಆತನ ಸುತ್ತಲೂ ಬೆಳಕಿನ ಪ್ರಭೆಯೊಂದು ಸುತ್ತುವರೆಯಲು ಆತನಿಗೆ ಇನ್ನಿಲ್ಲದ ಆನಂದವಾಯಿತು. ಅದೇ ಆನಂದದಲ್ಲಿ ದಿವ್ಯ ತೇಜಸ್ಸು ತುಂಬಿಕೊಂಡಿದ್ದ ಆ ಮುಖವನ್ನೇ ಕಣ್ತುಂಬಿಕೊಂಡು ನಿಂತಿದ್ದ ಆತನಿಗೆ ಇದೆಲ್ಲ ಯಾಕಾಗಿ ಎಂಬುದರ ಅರಿವಾಗಿ ಸಮಾಧಾನದ ನಿಟ್ಟುಸಿರುಬಿಟ್ಟ. ಈ ಕ್ಷಣದಲ್ಲಿ ತನ್ನ ಸುತ್ತಣ ಎಲ್ಲವೂ ಕಳಚಿ ನಿರಾಳನಾದೆ ಎಂಬ ಭಾವದಲ್ಲಿ ಆತನಿರುವಾಗಲೇ ಆ ಮುಖ ಕೈಬೀಸಿ ಕರೆದಂತಾಗಲು ತಟ್ಟನೆ ಎದ್ದು ಅದರ ಬೆನ್ನ ಹಿಂದೆ ಹೆಜ್ಜೆ ಹಾಕತೊಡಗಿದ. ಆಗ ಅಂಥ ಹಗಲಿನಲ್ಲೂ ಆತನನ್ನು ಸುತ್ತುವರಿದ ತಂಪನೆಯ ಬೆಳಕಿನ ಪ್ರಭೆಯು ಆತನ ದೇಹವನ್ನು ಕವಚದಂತೆ ಆವರಿಸಿಕೊಂಡಿತ್ತು. ಅದು ಎಲ್ಲರ ಪಾಲಿನ ಬದುಕಿನುದ್ದಕ್ಕೂ ಬಿಡದೇ ಕಾಡುವ ಲೋಭ, ಮೋಹ, ಸುಖ, ದುಃಖಗಳನ್ನು ಹೊರತುಪಡಿಸಿದ ಅನೂಹ್ಯವಾದ ಅನುಭವವನ್ನು ಆತನಿಗೆ ಉಂಟುಮಾಡುತ್ತಿತ್ತು.

ಇತ್ತ, ಆತನ ಮನೆ ಎದುರು ಆದಾಗಲೇ ಗುಂಪು ಗುಂಪಾಗಿ ಜನರು ಬಂದು ಸೇರತೊಡಗಿದ್ದರು. ಅವರೆಲ್ಲ, 'ನೋಡ್ಲಿಕ್ಕೆ ಮನುಸ್ಯಾ ಆಕಳಂಥವನು ಖರೇ... ಭಾಳ ಕೆಟ್ಟ ಗುಣದಾಂವ ಇದ್ದ! ಮುಸುರಿಗೈಲೆ ಕಾಗಿ ಹೊಡೀತಿರಲಿಲ್ಲ; ನನ್ನವರು ತನ್ನವರು ಅಂತಿರಲಿಲ್ಲ! ಬರೀ ರೊಕ್ಕ, ರೊಕ್ಕ... ಅಂತಿದ್ದ. ಸರಕಾರಿ ನೌಕ್ರಿಯೊಳಗ ಇರೂತಂಕ ಅಂತೂ ಬಡವ್ರು ಅನ್ಲಿಲ್ಲ, ಬಗ್ಗರು ಅನ್ಲಿಲ್ಲ... ಅವುರನ್ನೆಲ್ಲ ಹುರಿದು ಮುಕ್ಕಿದ. ಲಂಚ ತಿಂದ ತಿಂದ! ಆ ಲಂಚದ ರೊಕ್ಕದಾಗನ ಈ ಮನೆ ಕಟ್ಸಿದ್ದ! ಆದ್ರ, ಏನು ಮಾಡೂದೈತಿ? ಒಂದು ದಿನಾನೂ ತನ್ನ ಅವ್ವನ ಈ ಮನ್ಯಾಗ ತಂದು ಇಟ್ಕೊಲಿಲ್ಲ! ಅಕಿ ಊರ ಹೊರಗಿನ ಗುಡುಸುಲದಾಗನ ಜಲುಮ ತಗದ್ಳು. ಹೋಗ್ಲಿ, ಅಕಿ ಮೈಮ್ಯಾಗ ಹಬ್ಬ– ಹರಿದಿನಕ್ಕಂತ ಒಂದು ಹೊಸ ಸೀರಿ ಸಹಿತ ತಗೋಲಿಲ್ಲ. ಹಂಗ ನೋಡಿದ್ರ ಹೆಣ್ಣು ಜೀಂವಾನ ಬಂಜೆ ಮಾಡಿಡ್ಬೇಕು ಖರೇ... ಇಂಥ ಮಾನಗೆಟ್ಟ ಮಕ್ಕಳನ್ನು ಮಾತ್ರ ಕೊಡ್ಬಾರದು. ಏನು ಮಾಡೂದೈತಿ!?, ಎಲ್ಲಾನೂ ಹೆಂಡ್ತಿ, ಮಕ್ಕಿಗೆ ಲಾಭ ಮಾಡಿಟ್ಟು, ತಾನು ಮಾತ್ರ ಕುಂಡ್ಯಾಗ ಮಣ್ಣು ಹಾಕ್ಕೊಂಡ್ಹೋದ! ಇಂಥ ಮಕ್ಕನ್ನು ತಗೊಂಡು ಬೆಂಕಿ ಹಚ್ಬೂದೈತೇನು!? ಈಗ ನೋಡು, ಅವುನ ಮಣ್ಣಿಗೆ ಸೇರಿದವ್ರೆಲ್ಲ ಅವುನ ಅವ್ವನ ಬಳಗನ ಹೊರತು ಅವುನು ಗಳಿಸಿದ ಮಂದಿ ಅಲ್ಲ! ಈ ಜಲುಮ ತಗದು ಹೋಗುದಂದ್ರ ಸಾಮಾನ್ಯದ ಮಾತಲ್ಲ. ಅರಿತು ನಡೀಬೇಕಪ್ಪೊ...' ಎಂದು ಅಲ್ಲಲ್ಲಿ ನಿಂತುಕೊಂಡು ತಮ್ಮೊಳಗೇ ಮಾತಾಡಿಕೊಳ್ಳುತ್ತಿದ್ದರು.

ಹೊತ್ತು ಸವೆಯುತ್ತಿತ್ತು. ಹೊತ್ತು ಸವೆದಂತೆ ನೆರೆದ ಜನರು ಆಡಿಕೊಳ್ಳುತ್ತಿದ್ದ ಮಾತುಗಳೂ ಸಹ ಸವೆಯುತ್ತಿದ್ದವು. ಆದರೆ, ಆ ಹೊತ್ತಲ್ಲಿ ಅವರು ಮಾತಾಡಿಕೊಳ್ಳುತ್ತಿದ್ದ ಆ ಮಾತುಗಳು ವಿಕಾರವಾದ ಸತ್ಯವನ್ನು ಅನಾವರಣ ಮಾಡುವ ತೆರದಲ್ಲಿ ಅನುರಣಿಸುತ್ತಿದ್ದವು!

●